# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
## ಕೇಂದ್ರ ಕಛೇರಿ : ಸಾರಿಗೆ ಸದನ
## ಗುಲಬರ್ಗ

# ಚಾಲನಾ ಪರೀಕ್ಷೆಗಳ ವಿಧಾನದ ಪರಿಚಯ / ಮಾರ್ಗದರ್ಶಿ

**ವಿಶೇಷ ಸೂಚನೆ** :

❖ **ಚಾಲಕ ಹುದ್ದೆಗೆ ಆಯ್ಕೆ ವಿಧಾನ :**

ಅ) ನಿಗದಿತ ಎಲ್ಲಾ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಚಾಲಕ ವೃತ್ತಿ ಪರೀಕ್ಷೆಗಾಗಿ ಕರೆಯಲಾಗುವುದು. ತಲಾ 25 ಅಂಕಗಳಿಗೆ ಎರಡು ಪ್ರತ್ಯೇಕ ಚಾಲನಾ ಸಾಮರ್ಥ್ಯದ ಬಗ್ಗೆ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ಒಟ್ಟಾರೆ 50 ಅಂಕಗಳಿಗೆ 20 ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಪರಿಗಣಿಸಿ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದಮೇಲೆ ಜಾರಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು.


ಆ) ಚಾಲನಾ ಪರೀಕ್ಷೆಯನ್ನು ಗಣಕೀಕರಣಗೊಳಿಸಿದ್ದು ಸಂಪೂರ್ಣ ಪಾರದರ್ಶಕವಾಗಿರುತ್ತದೆ. ಅಭ್ಯರ್ಥಿಗಳು, ಮಧ್ಯವರ್ತಿಗಳ ಸುಳ್ಳು ಆಶ್ವಾಸನಗೆ ಮೋಸ ಹೋಗಬಾರದೆಂದು ಈ ಮೂಲಕ ಸೂಚಿಸಲಾಗಿದೆ.

ಇ) ಅಭ್ಯರ್ಥಿಗಳು ಚಾಲನಾ ಪರೀಕ್ಷೆಗೆ ಹಾಜರಾಗುವ ಮುನ್ನ ಈ ಮಾರ್ಗದರ್ಶಿಯನ್ನು ಕೂಲಂಕುಶವಾಗಿ ಅಭ್ಯಸಿಸಿ, ಮನದಟ್ಟು ಮಾಡಿಕೊಳ್ಳುವುದು.

ಈ) ಚಾಲನಾ ಪರೀಕ್ಷೆ ಮುಗಿದ ನಂತರ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು ಹಾಗೂ ಪರಿಶೀಲನಾ ವಿವರವನ್ನು ತಿಳಿಸಲಾಗುವುದು.

1. **ಮೊದಲನೆ ಹಂತ**:

ಅಭ್ಯರ್ಥಿಗಳ ಎತ್ತರ ಮತ್ತು ತೂಕವನ್ನು ಅಳತೆ ಮಾಡುವ ವಿದ್ಯುನ್ಮಾನ ಯಂತ್ರ ಗಣಿಕೀಕೃತ ವಿಧಾನದಿಂದ ಎತ್ತರ ಮತ್ತು ತೂಕವನ್ನು ಮಾಡಲಾಗುವುದು ವಿದ್ಯುನ್ಮಾನ ಮಾಧ್ಯಮದ ಮೂಲಕ ಮಾಹಿತಿಯನ್ನು ಗಣಕಕ್ಕೆ ವರ್ಗಾಯಿಸಲಾಗುವುದು.




ಗಣಕೀಕೃತ ವಿಧಾನದಿಂದ ಎತ್ತರ ಮತ್ತು ತೂಕವನ್ನು ಅಳತೆ ಮಾಡಲಾಗುವುದು. ವಿದ್ಯುನ್ಮಾನ ಮಾಧ್ಯಮದ ಮೂಲಕ ಮಾಹಿತಿಯನ್ನು ಗಣಕಕ್ಕೆ ವರ್ಗಾಯಿಸಲಾಗುವುದು.

2. <u>ಎರಡನೆ ಹಂತ:</u>

ಈಗಾಗಲೇ ತಿಳುವಳಿಕೆ ಪತ್ರದಲ್ಲಿ ತಿಳಿಸಿರುವಂತೆ ಅರ್ಜಿಯೊಂದಿಗೆ ಸಲ್ಲಿಸಲಾದ ದಾಖಲಾತಿಗಳನ್ನು ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆ ಮಾಡಲಾಗುವುದು.

3. <u>ಮೂರನೆ ಹಂತ:</u>

ಚಾಲನಾ ಪರೀಕ್ಷೆಯು ಕೆಳಕಂಡ ಒಟ್ಟು 5 ಪರೀಕ್ಷೆಗಳನ್ನು ಹೊಂದಿರುತ್ತದೆ. ಇದನ್ನು ಪ್ರತಿ ಅಭ್ಯರ್ಥಿಗೆ ಎರಡು ಹಂತದಲ್ಲಿ ನಡೆಸಲಾಗುವುದು.

1. ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ, ಮುಂದಕ್ಕೆ ಚಲಿಸುವುದು.
2.ಬಸ್ಸನ್ನು **"8"** ರ ಪಥದಲ್ಲಿ ಮುಂದಕ್ಕೆ ಚಲಿಸುವುದು.
3.ಬಸ್ಸನ್ನು **"S"** ನ ಪಥದಲ್ಲಿ ಹಿಂದಕ್ಕೆ ಚಲಿಸುವುದು.
4.ಬಸ್ಸನ್ನು ಹಿಂದಕ್ಕೆ ಚಲಿಸಿ, ನಿಲ್ಲಿಸುವುದು.
5.ಸಂಚಾರ ಸಂಕೇತಗಳನ್ನು ಗುರುತಿಸುವುದು.

## <u>ಕೆಳಗಿನ ಕ್ರಮವನ್ನು ಅನುಸರಿಸಿ ಪ್ರತಿ ಪರೀಕ್ಷೆಗೂ ಅಂಕಗಳನ್ನು ನೀಡಲಾಗುವುದು.</u>


### <u>ಒಂದನೆಯ ಚಾಲನಾ ಪರೀಕ್ಷೆ</u>

**ನಿಗದಿಪಡಿಸಿರುವ ಅಂಕಗಳು : 5**

**ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ, ಮುಂದಕ್ಕೆ ಚಲಿಸುವುದು.**

1. ಏರುಗತಿಯಲ್ಲಿ ಚಲಿಸಿ ವಾಹನವನ್ನು ನಿಲ್ಲಿಸುವುದು. ಹ್ಯಾಂಡ್ ಬ್ರೇಕ್‌ನ್ನು ಉಪಯೋಗಿಸುವುದು.
2. ಇಂಜಿನನ್ನು ನಿಲ್ಲಿಸುವುದು.
3. ಏರುಗತಿಯಲ್ಲಿ ವಾಹನವನ್ನು ಚಲಿಸಲು ಇಂಜಿನನ್ನು ಚಾಲನೆಗೊಳಿಸುವುದು.
4. ವಾಹನವು ಹಿಂದಕ್ಕೆ ಬಾರದೇ ಮುಂದೆ ಚಲಿಸಿದರೆ ಯಾವುದೇ ಅಂಕಗಳ ಕಡಿತವಿಲ್ಲ.
5. ವಾಹನವು 4 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 1 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ವಾಹನವು 4 ರಿಂದ 8 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ವಾಹನವು 8 ರಿಂದ 12 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
8. ವಾಹನವು 12 ರಿಂದ 16 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
9. ವಾಹನವು 16 ಅಂಗುಲಕ್ಕಿಂತ ಜಾಸ್ತಿ ಹಿಂದಕ್ಕೆ ಚಲಿಸಿದರೆ ಯಾವುದೇ ಅಂಕವನ್ನು ಕೊಡಲಾಗುವುದಿಲ್ಲ.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು ಏರುಗತಿಯಲ್ಲಿ ಚಾಲಿಸುವುದು.



ಹಿಮ್ಮುಖ ಚಾಲನೆಯನ್ನು ಗುರುತಿಸುವುದು.

## ಎರಡನೆಯ ಚಾಲನಾ ಪರೀಕ್ಷೆ

**ನಿಗದಿಪಡಿಸಿರುವ ಅಂಕಗಳು : 6**


**ಬಸ್ಸನ್ನು "8" ರ ಪಥದಲ್ಲಿ ಮುಂದಕ್ಕೆ ಚಲಿಸುವುದು.**

1. ಚಾಲನೆಯನ್ನು ಒಂದು ನಿಮಿಷದಲ್ಲಿ ಪೂರ್ಣಗೊಳಿಸತಕ್ಕದ್ದು.
2. ಚಾಲನೆಯು ಒಂದು ನಿಮಿಷದೊಳಗೆ ಪೂರ್ಣಗೊಂಡಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ಚಾಲನೆಯು 1 ರಿಂದ 1 ½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 1 ಅಂಕಗಳನ್ನು ಕಡಿತಗೊಳಿಸಲಾಗುವುದು.
4. ಚಾಲನೆಯು 1 ½ ರಿಂದ 2 ನಿಮಿಷದೊಳಗೆ ಪೂರ್ಣಗೊಂಡಲ್ಲಿ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
5. ಚಾಲನೆಯು 2 ರಿಂದ 2 ½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ಚಾಲನೆಯು 2½ ರಿಂದ 3 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ಚಾಲನೆಯು 3 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕಗಳನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು **"8"** ರ ಪಥದಲ್ಲಿ ಮುಂದಕ್ಕೆ ಚಲಿಸುವುದು.

ನಿಗದಿಪಡಿಸಿರುವ ಅಂಕಗಳು : 6

ನಿಗದಿಪಡಿಸಿರುವ ಸಮಯ : 1 ನಿಮಿಷ



## <u>ಮೂರನೆಯ ಚಾಲನಾ ಪರೀಕ್ಷೆ</u>

**ನಿಗದಿಪಡಿಸಿರುವ ಅಂಕಗಳು : 6**


**ಬಸ್ಸನ್ನು "S" ರ ಪಥದಲ್ಲಿ ಹಿಂದಕ್ಕೆ ಚಲಿಸುವುದು.**

1. ಈ ಚಾಲನೆಗೆ 3 ನಿಮಿಷಗಳ ಕಾಲಾವಧಿ ನಿಗದಿಪಡಿಸಲಾಗಿದೆ.
2. ಚಾಲನೆಯು 3 ನಿಮಿಷದೊಳಗೆ ಪೂರ್ಣಗೊಂಡಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ಚಾಲನೆಯು 3 ರಿಂದ 3½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 1 ಅಂಕವನ್ನು ಕಡಿತಗೊಳಿಸಲಾಗುವುದು.
4. ಚಾಲನೆಯು 3½ ರಿಂದ 4 ನಿಮಿಷದೊಳಗೆ ಪೂರ್ಣಗೊಂಡಲ್ಲಿ 2 ಅಂಕವನ್ನು ಕಡಿತಗೊಳಿಸಲಾಗುವುದು.
5. ಚಾಲನೆಯು 4 ರಿಂದ 4½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 3 ಅಂಕವನ್ನು ಕಡಿತಗೊಳಿಸಲಾಗುವುದು.
6. ಚಾಲನೆಯು 4½ ರಿಂದ 5 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕವನ್ನು ಕಡಿತಗೊಳಿಸಲಾಗುವುದು.
7. ಚಾಲನೆಯು 5 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕಗಳನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು **"S"** ರ ಪಥದಲ್ಲಿ ಮುಂದಕ್ಕೆ ಚಲಿಸುವುದು.

ನಿಗದಿಪಡಿಸಿರುವ ಅಂಕಗಳು : 6

ನಿಗದಿಪಡಿಸಿರುವ ಸಮಯ : 3 ನಿಮಿಷ



## ನಾಲ್ಕನೆಯ ಚಾಲನಾ ಪರೀಕ್ಷೆ

**ನಿಗದಿಪಡಿಸಿರುವ ಅಂಕಗಳು : 6**


**ಬಸ್ಸನ್ನು  ಹಿಮ್ಮುಕ ಚಲಿಸಿ ನಿಲುಗಡೆ ಮಾಡುವುದು.**

1. ಇದಕ್ಕೆ 1 ನಿಮಿಷ ಕಾಲಾವಧಿ ನಿಗದಿಪಡಿಸಲಾಗಿದೆ.
2. ನಿಲುಗಡೆಯು 1 ನಿಮಿಷದೊಳಗೆ ಪೂರ್ಣಗೊಂಡಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ನಿಲುಗಡೆಯು 1 ರಿಂದ 1 ½ ನಿಮಿಷದಲ್ಲಿ ಪೂರ್ಣಗೊಂಡಲ್ಲಿ 1 ಅಂಕವನ್ನು ಕಡಿತಗೊಳಿಸಲಾಗುವುದು.
4. ನಿಲುಗಡೆಯು 1 ½ ರಿಂದ 2 ನಿಮಿಷದಲ್ಲಿ ಪೂರ್ಣಗೊಂಡಲ್ಲಿ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
5. ನಿಲುಗಡೆಯು 2 ರಿಂದ 2 ½ ನಿಮಿಷದಲ್ಲಿ ಪೂರ್ಣಗೊಂಡಲ್ಲಿ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ನಿಲುಗಡೆಯು 3 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ನಿಲುಗಡೆಯು 3 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕವನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು ಹಿಮ್ಮುಖ ಚಾಲಿಸಿ ನಿಲುಗಡೆ ಮಾಡುವುದು.

ನಿಗದಿಪಡಿಸಿರುವ ಅಂಕಗಳು : 6

ನಿಗದಿಪಡಿಸಿರುವ ಸಮಯ : 3 ನಿಮಿಷ




## ಐದನೆಯ ಪರೀಕ್ಷೆ

**ನಿಗದಿಪಡಿಸಿರುವ ಅಂಕಗಳು : 2**


**ಸಮಯ: 2 ನಿಮಿಷ.**

ಅಭ್ಯರ್ಥಿಗೆ ನಾಲ್ಕು ರಸ್ತೆ ಸಂಕೇತಗಳನ್ನು ತೋರಿಸಿ, 8 ಆಯ್ಕೆಗಳನ್ನು ಕೊಟ್ಟಿದ್ದು, 4 ಸರಿ ಉತ್ತರಗಳಾಗಿರುತ್ತವೆ. ಅಭ್ಯರ್ಥಿಯು ಕೊಟ್ಟಿರುವ ಸಂಕೇತಗಳಿಗೆ ಸರಿಯಾದ ಉತ್ತರವನ್ನು ಹೊಂದಿಸಬೇಕು ಇದಕ್ಕೆ 2 ನಿಮಿಷಗಳ ಕಾಲಾವಧಿ ನಿಗದಿಪಡಿಸಲಾಗಿದೆ. ಪ್ರತಿ ಸರಿ ಉತ್ತರಕ್ಕೆ ಅಭ್ಯರ್ಥಿಗೆ ½ ಅಂಕ ಕೊಡಲಾಗುವುದು.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು ಹಿಮ್ಮುಖ ಚಲಿಸಿ ನಿಲುಗಡೆ ಮಾಡುವುದು.

ನಿಗದಿಪಡಿಸಿರುವ ಅಂಕಗಳು : 6

ನಿಗದಿಪಡಿಸಿರುವ ಸಮಯ : 1 ನಿಮಿಷ




| | |
|---|---|
| 1. ನಿಲುಗಡೆ ನಿಷೇಧಿಸಿದೆ | 2. ಭಾರ ಮಿತಿ. |
| 3. ಅಗಲ ಮಿತಿ | 4. ಏಕಮುಖ ಸಂಚಾರ |
| 5. ವಾಹನಗಳನ್ನು ನಿಷೇಧಿಸಿದೆ. | 6. ಕಡ್ಡಾಯ ಬಲತಿರುವು |
| 6. ವೇಗ ಮಿತಿ | 8. ಉದ್ದ ಮಿತಿ |

()()()()()()